'ಇಷ್ಟು ವರ್ಷಗಳ ನಂತರ ಬಂದಿದ್ದೀಯಾ..ನಾನು ನಿನ್ನನ್ನು ಎಲ್ಲಿಗೂ ಹೋಗಲು ಬಿಡುವುದಿಲ್ಲ..ನನ್ನ ಹೊಟ್ಟೆ ಉರಿಸಬೇಡಾ..ಬಾರೋ..!' ವಿಜಯಮ್ಮ ಆರ್ತವಾಗಿ ನುಡಿದರು. ಅವರ ಕಂಗಳು ಅವನನ್ನು ಕಂಡ ಸಂತೋಷಕ್ಕೋ, ಆತ ಬರಲು ನಿರಾಕರಿಸುತ್ತಿರುವ ವೇದನೆಗೋ ತೇವಗೊಂಡಿದ್ದವು.

'ಇಲ್ಲಾ..ನಾನು ಈ ಮನೆಯೊಳಗೆ ಕಾಲಿಡುವುದಿಲ್ಲ..' ಆತ ವಿಜಯಮ್ಮನ ಕೈ ಕೊಡವಲು ಯತ್ನಿಸಿದ.

'ಹಾಗೆನ್ನಬೇಡಾ..ಏನಿದ್ರೂ ಕೂತ್ಕೊಂಡು ಮಾತನಾಡೋಣ..ನಾನು ಎಲ್ಲಾ ಸರಿ ಮಾಡ್ತೀನಿ..ಈಗ ಇಲ್ಲೀವರೆಗೂ ಬಂದು ಹಾಗೇ ಹೋಗ್ಬೇಡಾ..ನಿನ್ಗೆ ಕೈ ಮುಗೀತೀನಿ..ಬಾರಪ್ಪಾ..' ವಿಜಯಮ್ಮ ಆರ್ದ್ರವಾಗಿ ನುಡಿದು ಅವನ ಕೈ ಹಿಡಿದು ಮನೆಯ ಒಳಗೆ ಬಲವಂತವಾಗಿ ಎಳೆದೊಯ್ಯುವ ಯತ್ನ ಮಾಡಿದರು. ಅವರ ಆಗ್ರಹ, ಕಂಬನಿಗೆ ಸೋತವನಂತೆ ಅವನು ಅವರನ್ನು ಹಿಂಬಾಲಿಸಿದರೂ, ಆತನ ಮುಖದಲ್ಲಿ ನಿರಾಕರಣೆ ಸ್ಪಷ್ಟವಾಗಿತ್ತು. ಅಪೂರ್ವ ದಿಕ್ಕೇ ತೋಚದವಳಂತೆ ಬಿಟ್ಟ ಬಾಯ್ತೆರೆದು ಹಾಗೇ ನೋಡುತ್ತ ನಿಂತಿದ್ದಳು. ನಡೆಯುತ್ತಿದ್ದ ವಿದ್ಯಮಾನ ವಿಚಿತ್ರವೆನಿಸಿ ಬೆಪ್ಪಳಾಗಿ ನೋಡುತ್ತಾ ಅವಳ ಯೋಚನಾ ಶಕ್ತಿಯೂ ಕೆಲಸ ಮಾಡದಂತಾಗಿತ್ತು.

'ಬಾಪ್ಪಾ..ಕೂತ್ಕೋ..ಎಷ್ಟು ವರ್ಷಗಳಾದವು ನಿನ್ನನ್ನು ನೋಡಿ..ಈಗ ನಿನ್ಗೆ ನನ್ನ ನೆನಪಾಯಿತೇನು..?' ಅವನ ತಲೆ ಕೆನ್ನೆ ತಡವುತ್ತ ಕಂಬನಿ ಹರಿಸುತ್ತ ಕಕ್ಕುಲತೆಯಿಂದ ವಿಚಾರಿಸಿದರು. ಬೆಪ್ಪಾಗಿ ನೋಡುತ್ತ ನಿಂತಿದ್ದ ಅಪೂರ್ವಳನ್ನು ಉದ್ದೇಶಿಸಿ, 'ಹೋಗಿ, ಏನು ತಿನ್ನಲು ಇದೆ.. ಅದನ್ನು ತಗೊಂಡ್ಬಾ.  ಪಾಪ.. ಇವನು ಸರಿಯಾಗಿ ತಿಂದು, ಉಂಡು ಯಾವ ಕಾಲವಾಯಿತೋ..ಬೇಗ ನಡಿ..!' ಅವರ ಆದೇಶದ ದನಿ ಅಪೂರ್ವಳಿಗೆ ಹೊಸದು.!

ಅಪೂರ್ವ ಒಳ ಹೋಗಿ ಉಳಿದಿದ್ದ ಚಪಾತಿ, ಸಾಗು ತಂದಿತ್ತಳು. ವಿಜಯಮ್ಮ ಅವನ ಮುಂದೆ ಉಪಹಾರದ ತಟ್ಟೆಯನ್ನು ಹಿಡಿದರು. ಅವನು ವಿಜಯಮ್ಮನ ಕಡೆಗೆ ರೋಷದಿಂದ ದಿಟ್ಟಿಸಿದ. ಅವನ ಕಂಗಳ ತೀಕ್ಷ್ಣತೆಗೆ ವಿಜಯಮ್ಮನೇ ಬೆದರುವಂತಾಯಿತು.

ಅವನು ಅವಡುಗಚ್ಚುತ್ತ, ಮೂಗಿನ ಹೊಳ್ಳೆಗಳನ್ನು ಅದುರಿಸುತ್ತ ಆ ಉಪಾಹಾರದ ತಟ್ಟೆಯನ್ನು ದೂರ ತಳ್ಳಿದ. ಆ ರಭಸಕ್ಕೆ ಉಪಾಹಾರದ ತಟ್ಟೆ ಅಷ್ಟು ದೂರಕ್ಕೆ ಹೋಗಿ ಬಿದ್ದು ನೆಲದ ಪಾಲಾಯಿತು. ಅವನ ವರ್ತನೆಯನ್ನು ಕಂಡು ಅಪೂರ್ವ ಬೆಚ್ಚಿ, ಗೋಡೆಗಾತುಕೊಂಡು ನಿಂತರೆ, ವಿಜಯಮ್ಮ ಅತ್ತೇ ಬಿಟ್ಟರು, 'ಯಾಕೋ..ಹೀಗಾಡ್ತೀಯಾ..? ತಿನ್ನುವ ವಸ್ತುವಿನ ಮೇಲೆ ಯಾರಾದ್ರೂ ಕೋಪ ಪ್ರದರ್ಶಿಸುತ್ತಾರೇನೋ..?'

'ನೀವು ನನ್ಗೆ ಮಾಡಿರುವುದನ್ನು ನೀವು ಮರೆತಿರಬಹುದು..ಆದ್ರೆ ನಾನು ಮರೆತಿಲ್ಲ..ಈ ಮನೇಲಿ ನಾನು ತಿನ್ನಬೇಕಾ..? ಇಲ್ಲ..ಸಾಧ್ಯ ಇಲ್ಲ..ಈ ಮನೆಯ ಹನಿ ನೀರನ್ನೂ ಸಹಿತ ನಾನು ಕುಡಿಯುವುದಿಲ್ಲ..ಎಲ್ಲಿದ್ದಾನೆ ನಿನ್ನ ಗಂಡ..? ಪತಿ ದೇವರು..? ಆ ಮಹಾಶಯನಿಗೆ ನಾನು ಈ ಮನೆಯೊಳಗೆ ಬರುವುದು ಸಹಿತ ಇಷ್ಟವಿಲ್ಲವಲ್ಲ..ಮತ್ಯಾಕೆ  ನೀನು ಈ ಪ್ರೀತಿ ವಿಶ್ವಾಸ ತೋರಿಸ್ತೀಯಾ..? ಪತಿಯ ಆಜ್ಞೆಗಳನ್ನು ಶಿರಸಾವಹಿಸಿ ಪಾಲಿಸುವ ಆಧುನಿಕ ಪತಿವ್ರತೆ ನೀನು..ಅಲ್ವಾ..? ಅವ್ನ ಮಾತು ಯಾಕೆ ಮೀರಿ ನನ್ನನ್ನು ಮನೆಯೊಳಗೆ ಸೇರಿಸಿಕೊಂಡಿದ್ದೀಯಾ..? ಈ ನಾಟಕವೆಲ್ಲಾ ಬೇಡಾ..ಸಾಕು ಮಾಡು..!' ಅವನ ಪ್ರತಿ ಮಾತೂ ಸಹ ರೋಷದಿಂದ ತುಂಬಿ ತುಳುಕುತ್ತಿತ್ತು. ಕಂಗಳು ಕಿಡಿ ಕಾರುವಂತಿದ್ದವು.

ವಿಜಯಮ್ಮ ಗದ್ಗದಿತರಾಗಿ, 'ಅವ್ರ ಮೇಲಿನ ಸಿಟ್ಟು, ನನ್ಮೇಲೆ ಯಾಕಪ್ಪಾ ತೋರಿಸ್ತೀಯಾ..? ನನ್ನ ಪರಿಸ್ಥಿತಿ, ನನ್ನ ಮನಸ್ಥಿತಿ, ನನ್ನ ಭಾವನೆಗಳಿಗೆ ಬೆಲೆನೇ ಇಲ್ವಾ..? ನಾನೇನು ಅಪರಾಧ ಮಾಡಿದ್ದೀನಿ ಅಂತ ನನಗೆ ಈ ಶಿಕ್ಷೆ ಹೇಳು..? ನಿನ್ನ ಬಗ್ಗೆ ನೆನೆಯದ ಕ್ಷಣವಿಲ್ಲ ಗೊತ್ತ..? ಇಷ್ಟು ವರ್ಷಗಳು ನಾನು ಹೇಗೆ ಕಳೆದೆ ಅಂತ ನನ್ನ ಅಂತರಂಗಕ್ಕೆ  ಮಾತ್ರ ಗೊತ್ತು..ಎದೆಯಲ್ಲಿ ದಳ್ಳುರಿ ಹೊತ್ಕೊಂಡು ಒಳಗೇ ಸುಡ್ತಾ ಇದ್ದೀನಿ..ನಾನು..!' ಅವರ ದನಿ ಸಂತಾಪದಿಂದ ಭಾರವಾಗಿತ್ತು.

'ಸುಳ್ಳು..ಎಲ್ಲಾ ಸುಳ್ಳು..ನಾನು ನಂಬಲ್ಲ..ಹಾಗಿದ್ದರೆ ನನ್ನನ್ನು ನೋಡಲು ನೀವು ಯಾಕೆ ಬರಲೇ ಇಲ್ಲ..? ನಾನು ಬದುಕಿದ್ದೂ ಸತ್ತಂತ್ತಿದ್ದೆ.. ಪ್ರತಿದಿನ..ಪ್ರತಿಕ್ಷಣ..ನಿಮ್ಮ ಆಗಮನದ ನಿರೀಕ್ಷೆಯಲ್ಲಿ ಕಳೆದೆ..ನಿಮಗಾಗಿ ಎಷ್ಟೊಂದು ಹಂಬಲಿಸುತ್ತಿದ್ದೆ..ಆದ್ರೆ..ನೀವು ಯಾರೂ ನಾನು ಏನಾಗಿದ್ದೀನಿ ಅಂತ ನೋಡಲೂ ಬರಲಿಲ್ಲ..ನಿಮ್ಮ ನಿರ್ಲಕ್ಷ್ಯ, ನಿಮ್ಮ ನಿರಾಕರಣೆಯ ರೂಪದಲ್ಲಿ ನನ್ನ ಹೃದಯದ ಮೇಲೆ ಎಂಥ ಗಾಯ ಮಾಡ್ತಿತ್ತು ಅಂತ ನೀವು ಯೋಚ್ನೆ ಮಾಡಿದ್ದೀರಾ..? ಈಗ ಈ ತೋರಿಕೆಯ ಪ್ರೀತಿಯನ್ನು ನಾನು ನಂಬಬೇಕಾ..? ಸ್ವೀಕರಿಸಬೇಕಾ..? ನನ್ಗೆ ಅಗತ್ಯವಿದ್ದಾಗ ನೀವು ನನ್ನ ನೆರವಿಗೆ ಬರಲಿಲ್ಲ..ಹೋಗ್ಲಿ..ಒಂದು ಮಾನಸಿಕ ಒತ್ತಾಸೆಯಾಗಿಯೂ ನೀವು ನನ್ನ ಜೊತೆ ನಿಲ್ಲಲಿಲ್ಲ..ಈಗ ನಾನು ಯಾಕೆ ಬೇಕು..?' ಪ್ರತಿಶೋಧದ ಜ್ವಾಲೆಯಲ್ಲಿ ಅದ್ದಿ ತೆಗೆದಂತೆ ಅವನ ದನಿಯಲ್ಲಿ ಕ್ರೋಧ ವ್ಯಕ್ತವಾಗುತ್ತಿತ್ತು. ಕುಲುಮೆಯ ಬೆಂಕಿಯ ಮೇಲೆ ಕುಳಿತವನಂತೆ ಆತ ಕುಳಿತಲ್ಲೇ ಚಡಪಡಿಸುತ್ತಿದ್ದ.

ವಿಜಯಮ್ಮ ಆತನನ್ನು ಅಷ್ಟೇಕೆ ಸಂತೈಸುತ್ತಿದ್ದಾರೆ..? ಅವನನ್ನು ಅಷ್ಟೇಕೆ ಓಲೈಸುತ್ತಿದ್ದಾರೆ..? ನಿಂತು ನೋಡುತ್ತಿದ್ದ ಅಪೂರ್ವಳಿಗೆ ಅರ್ಥವಾಗಲಿಲ್ಲ. ಅವನ ಬಿರುಸು ಮಾತುಗಳು, ಕಂಗಳಲ್ಲಿನ ಕ್ರೋಧ, ಅವನ ತಿರಸ್ಕಾರದ ಹಿಂದಿನ ಕಾರಣದ ಸುಳಿವಿರದ ಆಕೆ ದೂರ ನಿಂತು ಬಿಟ್ಟ ಬಾಯ್ತೆರೆದು ಪ್ರೇಕ್ಷಕಿಯಂತೆ ವೀಕ್ಷಿಸುತ್ತಿದ್ದಳು.

'ನಿನ್ನ ಸಿಟ್ಟು ,ತಾಪ ಎಲ್ಲಾ ನನ್ಗೆ ಅರ್ಥವಾಗುತ್ತೆ..ನಿನ್ಗೆ ನನ್ನ ಪರಿಸ್ಥಿತಿ ಗೊತ್ತಿಲ್ವಾ..? ನಾನು ಏನು ಮಾಡೋ ಹಾಗಿದ್ದೀನಿ..?  ಈ ಸಲ ನಾನು ಸುಮ್ನೆ ಇರೋದಿಲ್ಲ.. ನಾನೇ ಮಾತನಾಡಿ ಎಲ್ಲಾ ಸರಿ ಮಾಡ್ತೀನಿ..ಆವೇಶ ಪಡದೇ ಸ್ವಲ್ಪ ಸಮಾಧಾನದಿಂದ ವರ್ತಿಸು..' ವಿಜಯಮ್ಮನ ಕಳಕಳಿಯ ದನಿ ಅವನ ಮೇಲೆ ಯಾವ ಪರಿಣಾಮವೂ ಬೀರಲಿಲ್ಲ. ಅವನ ಮಾಸಲು, ಹರಿದ ಬಟ್ಟೆ, ಹುಲುಸು ಗಡ್ಡ, ಕೆಂಚಾಗಿ ಉದ್ದಕ್ಕೆ ಬೆಳೆದಿದ್ದ ತಲೆಗೂದಲು, ಅವೆಲ್ಲಕ್ಕೂ ಮೀರಿ, ಅವನ ಮುಖದಲ್ಲಿನ ವ್ಯಗ್ರತೆ ಅವನ ಮನಸ್ಥಿತಿಯ ಪ್ರತೀಕವಾಗಿ ತೋರಿ ಬಂದಿತ್ತು.

'ಇಲ್ಲಾ..ನಿಮ್ಗೆ ನಾನು ಬೇಡವಾಗಿರುವ ಕಾರಣಕ್ಕೆ ನನ್ನನ್ನು ದೂರ ಮಾಡಿದ್ದೀರಿ ನೀವು..! ನನ್ಗೆ ನಿಮ್ಮ ಅಗತ್ಯವಿದ್ದಾಗ ನನ ಜೊತೆ ನೀವು ಇರಲಿಲ್ಲ..ಈಗ ನಿಮ್ಗೆ ನಾನು ಬೇಕಾ..?' ಅವನು ಕಣ್ಣು ಕೆಕ್ಕರಿಸಿ ನೋಡುತ್ತ ಪ್ರಶ್ನಿಸಿದ.

'ಅಗತ್ಯ ಇಲ್ಲ..ನಿನ್ಗೆ..ಇಲ್ಲಿ ಬರಲು ತಿಳಿಸಿದವರು ಯಾರು..? ನಾವ್ಯಾರೂ ನಿನ್ನನ್ನು ಇಲ್ಲಿ ಬಾ ಅಂತ ಸ್ವಾಗತಿಸಿಲ್ಲ..ಆಹ್ವಾನಿಸಿಲ್ಲ..ಆಮಂತ್ರಣ ಪತ್ರಿಕೆಯನ್ನೂ ನೀಡಿಲ್ಲ..ನಿನ್ನ ಅಗತ್ಯ ಖಂಡಿತವಾಗಿ ನಮಗಿಲ್ಲ..ನೀನು ಧಾರಾಳವಾಗಿ ಇಲ್ಲಿಂದ ಹೋಗಬಹುದು..' ಪ್ರಭಾಕರರಾಯರ ಗಡಸು ದನಿ ಬಾಗಿಲ ಬಳಿಯಿಂದ ಅಪ್ಪಳಿಸಿದಾಗ ಆತ ಕೀಲಿ ಕೊಟ್ಟ ಗೊಂಬೆಯಂತೆ ಎದ್ದು ನಿಂತ. ರಾಯರನ್ನು ಕಂಡಾ ಅವನ ಮುಖ ಪೂರ್ತಿಯಾಗಿ ಬಿಳಿಚಿಕೊಂಡಿತು.

ವಿಜಯಮ್ಮ ವಿಚಲಿತರಾಗಿ, 'ಹಾಗೆನ್ನಬೇಡಿ..ವರ್ಷಗಳ ನಂತರ ಅವ್ನು ನಮಗೆ ಸಿಕ್ಕಿದ್ದಾನೆ..ಮನೆಗೆ ಬಂದಿದ್ದಾನೆ..!' ನಿಂತಿದ್ದ ರಾಯರ ಬಳಿ ಧಾವಿಸಿ ವಿಜಯಮ್ಮ ಅನುನಯದ ಸ್ವರದಲ್ಲೆಂದಾಗ ಅವರ ಮಾತುಗಳನ್ನು ಅರ್ಧಕ್ಕೇ ತುಂಡರಿಸುತ್ತ, 'ವಿಜಯಾ..ಸಂಬಂಧವಿಲ್ಲದವನ ಹತ್ತಿರ ..ಯಾಕೆ ಈ ಅಕ್ಕರೆ, ಅನುಕಂಪ..ಪ್ರೀತಿ ತೋರಿಸ್ತೀಯಾ..? ಅವನನ್ನು ಮನೆಯಿಂದ ಹೊರಗಡೆ ಹಾಕು..ಅವನ ಮುಖ ನೋಡಲೂ ನಾನು ಇಷ್ಟ ಪಡುವುದಿಲ್ಲ..!' ಎಂದರು ಕಟುವಾಗಿ.

'ನೀವು ಎಂದಿಗೂ ಬದಲಾಗದ ಜನರು! ಇಷ್ಟು ವರ್ಷಗಳ ಅಂತರ, ನಿಮ್ಮನ್ನು ಒಳಗೇ ಅಲುಗಾಡಿಸಿರಬಹುದು..ನನ್ನ ಬಗ್ಗೆ ಮೃದು ಧೋರಣೆ ತಳೆದಿರಬಹುದೂಂತ ನಾನು ಆಶಿಸಿದೆ.. ಆದ್ರೆ ಹಾಗಾಗಲಿಲ್ಲ..ಪ್ರೀತಿಯಿಂದ ಪಡೆಯಲಾಗದಿದ್ರೆ ಹಕ್ಕಿನಿಂದ ಪಡೆಯಬೇಕಂತೆ.. ನಾನು ಇಲ್ಲಿಂದ ಹೋಗೋದಿಲ್ಲ ಅಂದ್ರೆ ನೀವು  ಏನು ಮಾಡ್ತೀರಾ..?' ಆತ ಒಮ್ಮೆಗೇ ತನ್ನ ವರಸೆ ಬದಲಿಸಿ ಪಟ್ಟಾಗಿ ಕುಳಿತು ಬಿಟ್ಟ.

'ಕತ್ತು ಹಿಡಿದು ಆಚೆ ದಬ್ಬೀನಿ..ಕಳ್ಳರಿಗೆ ಈ ಮನೆಯಲ್ಲಿ ಜಾಗವಿಲ್ಲ..ಎಲ್ಲಿ

## ಎಟಿಎಂ

ಬಾಗಿಲೊಳು
ಕೈ ಮುಗಿದು
ಒಳಗೆ ಬಾ
ಗ್ರಾಹಕನೆ

★ ಫಾಲನೇತ್ರ, ಗಂಗಪ್ಪ ಸಜ್ಜನ




ವಿಜಯ